**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ**
**ಕ್ರಿಮಿನಲ್ ಮೊಕದ್ದಮೆ ನಂ. 220/2018.**

**ಚಾಸಾ-1**

**ಪ್ರಾಸಾ-4**

**ದಿನಾಂಕಃ 15-11-2025 ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು .**

| | | |
|---|---|---|
| ಸಾಕ್ಷಿಯ ಹೆಸರು | ಃ | ಗಂಗಯ್ಯ ತಃ ಸಿದ್ದಪ್ಪ |
| ವಯಸ್ಸು | ಃ | 66 ವರ್ಷ |
| ಉದ್ಯೋಗ | ಃ | ನಿವೃತ್ತ ಅಬಕಾರಿ ಉಪ ನಿರೀಕ್ಷಕರು |
| ವಾಸ | ಃ | ಬೆಂಗಳೂರು ಗ್ರಾಮಾಂತರ, ನೆಲಮಂಗಲ |

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ.</u>**

1. ನಾನು ದಿಃ 02-04-2018 ರಿಂದ ದಿಃ 24-11-2018 ರವರೆಗೆ ಅನಮೊಡ ಅಬಕಾರಿ ತನಿಖಾ ಠಾಣೆಯಲ್ಲಿ ಅಬಕಾರಿ ಉಪನಿರೀಕ್ಷಕರು ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 13-04-2018 ರಂದು ನಾನು, ಚಾಸಾ-2 ಮತ್ತು 3 ರವರ ಜೊತೆ ರಾತ್ರಿ ಪಾಳೇಯದಲ್ಲಿ ಆನಮೋಡ ತನಿಖಾಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ, ಬೆಳಿಗ್ಗೆ 05-45 ಗಂಟೆ ಸಮಯದಲ್ಲಿ ವಾಹನಗಳನ್ನು ತಪಾಸಣೆ ಮಾಡುತ್ತಿರುವಾಗ ಗೋವಾ ಕಡೆಯಿಂದ ಒಂದು ದ್ವಿಚಕ್ರ ವಾಹನ ಸಂಃ ಕೆಎ-22/ಇ.ಎಕ್ಸ - 3058 ವಾಹನ ಅತಿವೇಗ ಬಂದಿತ್ತು. ಸದ್ರಿ ವಾಹನವನ್ನು ತಡೆದು ನಿಲ್ಲಿಸಿ, ವಿಚಾರಣೆ ಮಾಡಿದಾಗ, ವಾಹನದ ಚಾಲಕ ಸರಿಯಾದ ಉತ್ತರವನ್ನು ಕೊಡಲಿಲ್ಲ. ಆಗ ವಾಹನವನ್ನು ಚಾಲಕನನ್ನು ಕರೆದುಕೊಂಡು ಠಾಣೆಗೆ ತೆರೆಳಿ, ವಾಹನದಲ್ಲಿದ್ದ ಒಂದು ಹಸಿರು ಮತ್ತು ಕೆಂಪು ಮಿಶ್ರಿತ ಬ್ಯಾಗನ್ನು ಪರಿಶೀಲನೆ ಮಾಡಲು, ನ್ಯಾಯಾಲಯದಿಂದ ಅನುಮತಿ ಪಡೆಯಲು ಸಮಯಾಕವಕಾಶ ಇಲ್ಲದ ಕಾರಣ, ಸ್ಥಳದಲ್ಲಿಯೇ ಶೋಧನಾ ಸಮುಚ್ಚಿತ ವಾರೆಂಟ್ ನ್ನು ತಯಾರಿಸಿ, ಸದರಿ

ಬ್ಯಾಗನ್ನು ತೆಗೆದು ಪರಿಶೀಲನೆ ಮಾಡುತ್ತಿರುವಾಗ, ಆರೋಪಿ ಹಿಂದೆ ಇರುವ ಬಾಗಿಲಿನಿಂದ ಓಡಿ ಹೋದ ಮತ್ತು ಅರಣ್ಯದಲ್ಲಿ ತಪ್ಪಿಸಿಕೊಂಡಿರುತ್ತಾನೆ ಹಿಡಿಯಲು ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ.

3. ನಂತರ ಸದರಿ ಬ್ಯಾಗನ್ ನ್ನು ತೆಗೆದು ನೋಡಿದಾಗ, ಅದರಲ್ಲಿ

1. 180 ಎಂ.ಎಲ್ ನ ರಾಯಲ್ ಸ್ಟ್ಯಾಗ್ಸ ವಿಕ್ಕಿಯ 8 ಬಾಟಲಿಗಳು
2. 750 ಎಂ.ಎಲ್ ನ ರಾಯಲ್ ಸ್ಟ್ಯಾಗ್ಸ ವಿಕ್ಕಿಯ 2 ಬಾಟಲಿಗಳು
3. 750 ಎಂ.ಎಲ್ ನ ರಿಯಲ್ ವಿಕ್ಸಿಯ 8 ಬಾಟಲಿಗಳು
4. 500 ಎಂ.ಎಲ್ ನ ಬಿಯರ್ ನ 24 ಟಿನಗಳು ಇದ್ದವು.

4. ಆರೋಪಿಯಿಂದ ಪಡೆದ ಬ್ಯಾಗನಲ್ಲಿ ಒಂದ ಚೀಟಿ ಇದ್ದು, ಅದರಲ್ಲಿ ಜ್ಞಾನೇವೇಶ್ವರ ತಂದೆ ಬಲಿರಾಮ ಗುರವ ಮತ್ತು ಅವರ ವಿಳಾಸವನ್ನು ಬರೆಯಲಾಗಿತ್ತು.

5. ನಂತರ ನಾನು ಮತ್ತು ಚಾಸಾ. 1, 2 ರವರ ಸಮಕ್ಷಮ ಎಲ್ಲಾ ಮದ್ಯವನ್ನು ಜಪ್ತು ಮಾಡಿ, ಅವುಗಳಲ್ಲಿ ತಲಾ ಎರಡರಂತೆ 8 ಬಾಟಲಿಗಳು / ಟಿನ್ಗಳನ್ನು ರಾಸಾಯನಿಕ ಪರೀಕ್ಷೆಗೆಂದು ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಸುತ್ತಿ ದಾರ ಕಟ್ಟಿ ಸೀಲ ಮಾಡಲಾಯಿತು. ಮತ್ತು ಅವುಗಳ ಮೇಲೆ ಮಾದರಿ ಚೀಟಿಯನ್ನು ಹಚ್ಚಿ ನಮ್ಮ ಸಹಿಯನ್ನು ಪಡೆಯಲಾಯಿತು.ಸದರಿ ಪಂಚನಾಮೆಯನ್ನು ಅದೇ ದಿನ ಬೆಳಿಗ್ಗೆ 5.45 ರಿಂದ 7.00 ಗಂಟೆಯವರೆಗೆ ತಯಾರಿಸಲಾಯಿತು. ನಂತರ ಅಕ್ರಮ ಮದ್ಯವನ್ನು, ಪಂಚನಾಮೆಯನ್ನು ಪಡೆದುಕೊಂಡು ಚಾಸಾ 1 ರವರು ಮುಂದಿನ ಕ್ರಮಕ್ಕೈಗೊಂಡಿರುತ್ತಾರೆ.

6. ನಂತರ ನಾನೇ ಸರಕಾರದ ವತಿಯಿಂದ ಆರೋಪಿಯ ವಿರುದ್ಧ ದೂರನ್ನು ನೀಡಿ, ಠಾಣಾ ಗುನ್ನಾ ನಂಃ 03/2017-2018 ರಂತೆ ಪ್ರಕರಣವನ್ನು ದಾಖಲಿಸಿ, ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ನನ್ನ ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ.

7. ನಂತರ ಸದರಿ ವಾಹನದ ಬಿ ಎಕ್ಸಟ್ಯಾಕ್ಸ ನ್ನು ಕೋರಿ ನಿವೇದನೆಯನ್ನು ಸಲ್ಲಿಸಿ, ಬಿ ಎಕ್ಸಟ್ಯಾಕ್ಸ ನ್ನು ಪಡೆದುಕೊಂಡಿರುತ್ತೇನೆ.

.

8. ಸಾಕ್ಷಿಯು ಶೋಧನಾ ಸಮುಚ್ಚಿತ ವಾರೆಂಟ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗ **ನಿಪಿ-2** ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2 (ಎ) ಎಂದು ಗುರುತಿಸಲಾಯಿತು.

9. ಸಾಕ್ಷಿಯು ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 (ಸಿ) ಎಂದು ಗುರುತಿಸಲಾಯಿತು.

10. ಸಾಕ್ಷಿಯು ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗ **ನಿಪಿ-3** ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-3 (ಎ)** ಎಂದು ಗುರುತಿಸಲಾಯಿತು.

11. ಸಾಕ್ಷಿಯು ತಾನು ನೀಡಿದ ಕೋರಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗ **ನಿಪಿ-4** ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-4 (ಎ)** ಎಂದು ಗುರುತಿಸಲಾಯಿತು.

12. ಸಾಕ್ಷಿದಾರರು 8 ಬಾಟಲಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ 1 ರಿಂದ 8 ಎಂದು ಗುರುತಿಸಲಾಗಿರುತ್ತದೆ.

13. ಈ ದಿನ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಪಾಟೀ ಸವಾಲಿಗೆ ಸಮಯಾವಕಾಶವನ್ನು ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಸಹಿ ಇದೆ/-**

**(ತೇಜಸ್ವಿನಿ ಸೊಗಲದ)**

**ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ. ದಂಡಾಧಿಕಾರಿಗಳು,ದಾಂಡೇಲಿ.**